ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 42/2018

(ಪ್ರಾಸಾ-7 ಚಾಸಾ-21)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 17.03.2026

| | | |
|---|---|---|
| ಸಾಕ್ಷಿದಾರರ ಹೆಸರು | - | ಕೆಂಪಮ್ಮ |
| ಗಂಡನ ಹೆಸರು | - | ನಾರಾಯಣಪ್ಪ |
| ವಯಸ್ಸು | - | 54 ವರ್ಷ, |
| ಉದ್ಯೋಗ | - | ಪಿಎಸ್ಐ, ವೈಟ್ ಫೀಲ್ ಟ್ರಾಫಿಕ್ |
| ವಾಸ | - | ಚನ್ನಸಂದ್ರ, ಬೆಂಗಳೂರು |

<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

ನಾನು 2017 ರಿಂದ 2021 ರವರೆಗೆ ವೈಟ್‌ಫೀಲ್ಡ್ ಪೋಲಿಸ್ ಠಾಣೆಯಲ್ಲಿ ಎಎಸ್ಐ ಆಗಿ ಕಾರ್ಯನಿರ್ವಹಿಸುತ್ತಿದ್ದೆನು. ದಿನಾಂಕ 25.05.2017 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಮಧ್ಯಾಹ್ನ 12.00 ಘಂಟೆ ಸಮಯದಲ್ಲಿ ಚಾಸಾ-1 ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದು ಠಾಣಾ ಮೊಕದ್ದಮೆ ಸಂಖ್ಯೆ 197/2017 ರಲ್ಲಿ ಪ್ರಥಮ ವರ್ತಮಾನ ವರದಿಯನ್ನು ನೊಂದಾಯಿಸಿರುತ್ತೇನೆ. ದೂರು ಮತ್ತು ಪ್ರ.ವ.ವರದಿಯನ್ನು ಠಾಣಾ ಸಿಬ್ಬಂದಿಯ ಮುಖಾಂತರ ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದು ಪ್ರತಿಗಳನ್ನು ಹಿರಿಯ ಅಧಿಕಾರಿಗೆ ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿ ದೂರು ಮತ್ತು ತಮ್ಮ ಸಹಿ ನೋಡಿ ಗುರುತಿಸಿದ್ದು ದೂರು ಈಗಾಗಲೇ ನಿಪಿ-1 ಎಂದು ಗುರ್ತಿಸಲಾಗಿದ್ದು, ನಿಪಿ-1 ದೂರಿನಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ-1(ಬಿ) ಎಂದು ಗುರ್ತಿಸಲಾಯಿತು. ಪ್ರ.ವ.ವರದಿಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಪ್ರ.ವ.ವರದಿಯನ್ನು ನಿಪಿ-6 ಎಂದು ಮತ್ತು ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ-6(ಎ) ಎಂದು ಗುರ್ತಿಸಲಾಯಿತು.

2. ದಿಃ25.05.2017 ರಂದು ಕೃತ್ಯ ನಡೆದ ಸ್ಥಳವಾದ ಇಸಿಸಿ ರಸ್ತೆಯಲ್ಲಿನ ಜತ್ತಿದ್ವಾರಕಮಯಿ ವಿಲ್ಲಾದ ಪಾರ್ಕ್ ಬಳಿ ಇರುವ ಪಿಟ್ ಟ್ಯಾಂಕ್ ಹತ್ತಿರ ಭೇಟಿ ನೀಡಿ ಚಾಸಾ-1 ಸ್ಥಳ ತೋರಿಸಿದ ಮೇರೆಗೆ ಚಾಸಾ-6 ಮತ್ತು 9 ರವರ ಸಮಕ್ಷಮ ಮಧ್ಯಾಹ್ನ 01.00 ರಿಂದ 02.30 ವರೆಗೆ ಪಂಚನಾಮೆ ಕ್ರಮ ಜರುಗಿಸಿರುತ್ತೇನೆ. ಸದರಿ ಪಂಚನಾಮೆ ಸಮಯದಲ್ಲಿ ಸ್ಥಳದಲ್ಲಿದ್ದ ಎರಡು ತುಂಡಾದ ಒಂದು ಹಗ್ಗ, ಒಂದು ಜೊತೆ ಚಪ್ಪಲಿ, ಒಂದು ಸಿಮೆಂಟ್ ಕಲರ್ ಮಲ ಅಂಟಿದ ಕಾಚಾ, ಮಲ ಅಂಟಿದ ಒಂದು ಪ್ಲಾಸ್ಟಿಕ್ ಬಕೇಟ್ ಇವುಗಳನ್ನು ಪಂಚರ ಸಮಕ್ಷಮ ಅಮಾನತುಪಡಿಸಿಕೊಂಡಿರುತ್ತೇನೆ. ನಂತರ ಠಾಣೆಗೆ ಹಿಂತಿರುಗಿ ಪಿಎಫ್ ನಂ.55(ಎ)/2017 ರಲ್ಲಿ ಮಾಲುಗಳನ್ನು ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿ ಪಂಚನಾಮೆ ಮತ್ತು ತಮ್ಮ ಸಹಿ ನೋಡಿ ಗುರುತಿಸಿದ್ದು ಪಂಚನಾಮೆ ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಅದೇ ದಿನ ಪ್ರಕರಣದ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-23 ರವರಿಗೆ ಹಸ್ತಾಂತರಿಸಿರುತ್ತೇನೆ. ಸಾಕ್ಷಿ ಮು.ಮಾ-1 ರಿಂದ 4 ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎನ್ ಐ ಜಿ ವಕೀಲರಿಂದಃ</u>**

3. ವೈಟ್ ಫೀಲ್ಡ್ ಪೋಲಿಸ್ ಠಾಣೆಯಿಂದ ಜತ್ತಿದ್ವಾರಕಮಯಿ ವಿಲ್ಲಾ ಪಾರ್ಕ್ ಮೂರು ಕಿಮೀ ಅಂತರದಲ್ಲಿ ಇರುತ್ತದೆ. ದೂರು ಸಲ್ಲಿಸಲು ಆದ ವಿಳಂಬಕ್ಕೆ ಕಾರಣವನ್ನು ನಾನು ಚಾಸಾ-1 ಇವರಿಗೆ ವಿಚಾರಿಸಿ ಪ್ರ.ವ.ವರದಿಯಲ್ಲಿ ನಮೂದು ಮಾಡಿಲ್ಲ. ನಾನು ಸ್ಥಳಕ್ಕೆ ಮಧ್ಯಾಹ್ನ 1.00 ಘಂಟೆಗೆ ಹೋದೆನು. ಸ್ಥಳದಲ್ಲಿ ಎಸ್ ಟಿ ಪಿ ಟ್ಯಾಂಕ್ ಹಾಗೂ ವಾಟರ್ ಟ್ಯಾಂಕ್ ಅನ್ನು ನೋಡಿರುತ್ತೇನೆ. ಸ್ಥಳದಲ್ಲಿ ಆರೋಪಿತರು ವಾಟರ್ ಟ್ಯಾಂಕ್ ಅನ್ನು ಸ್ವಚ್ಛ ಮಾಡಿಸುತ್ತಿದ್ದರು ಎಂದರೆ ಸರಿಯಲ್ಲ, ಎಸ್ ಟಿ ಪಿ ಟ್ಯಾಂಕ್ ಅನ್ನು ಸ್ವಚ್ಛ ಮಾಡಿಸುತ್ತಿದ್ದರು. ಚಾಸಾ-1 ಇವರು, ಎಸ್ ಟಿ ಪಿ ಟ್ಯಾಂಕ್ ಅನ್ನು ಸ್ವಚ್ಛ ಮಾಡಿಸುತ್ತಿದ್ದ ಬಗ್ಗೆ ನನಗೆ ಹೇಳಿದರು. ಸ್ವಚ್ಛ ಮಾಡುವಾಗ ಚಾಸಾ-1 ಇವರು ಸ್ಥಳದಲ್ಲಿ ಇರಲಿಲ್ಲ. ಈ ಪ್ರಕರಣದಲ್ಲಿರುವ ಘಟನೆಯು ಎಸ್ ಟಿ ಪಿ ಟ್ಯಾಂಕ್ ಅನ್ನು ಸ್ವಚ್ಛಗೊಳಿಸುವಾಗ ಆದಂತಹ

ಘಟನೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಮು.ಮಾ-1 ರಿಂದ 4 ಸ್ಥಳದಲ್ಲಿ ಇರದೇ ಅವುಗಳನ್ನು ನಾನು ಸುಳ್ಳು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಎಸ್ ಎನ್ ವಕೀಲರಿಂದಃ**

1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸುತ್ತಾರೆ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು